


International Journal of Kannada Research
www.kannadajournal.com

**ISSN: 2454–5813**
IJKR 2019; 5(2): 17-21
© 2019 IJKR
www.kannadajournal.com
Received: 06-02-2019
Accepted: 10-03-2019

**B Vijaya Kumar**
Research Scholar, Department of Kannada Language and Translation Studies, Dravidian University, Srinivasavanam, Kuppam, Chittor District, Andhra Pradesh, India

**Correspondence**
**B Vijaya Kumar**
Research Scholar, Department of Kannada Language and Translation Studies, Dravidian University, Srinivasavanam, Kuppam, Chittor District, Andhra Pradesh, India

# ಅಧ್ಯಯನಕಾರರ ದೃಷ್ಟಿಯಲ್ಲಿ ಜನಪದಗೀತೆಗಳ ವೈವಿಧ್ಯ: ಒಂದು ವಿಶ್ಲೇಷಣೆ

**B Vijaya Kumar**

ಮೌಖಿಕ ಪರಂಪರೆಯಲ್ಲಿ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿರುವ ಗೀತೆಗಳೇ ಜನಪದಗೀತೆಗಳು. ಕರ್ನಾಟಕದಲ್ಲಿ ಜನಪದಗೀತೆಗಳಿಗೆ ನೂರಾರು ವರ್ಷಗಳ ಇತಿಹಾಸ ಇದ್ದು ಅವುಗಳ ಸಂಗ್ರಹ ಮತ್ತು ಅಧ್ಯಯನದ ಬೆಳವಣಿಗೆಯನ್ನು ಕಳೆದ ಶತಮಾನದ ಎರಡನೇ ದಶಕದಿಂದೀಚೆಗೆ ವಿವರವಾಗಿ ಗುರುತಿಸಬಹುದಾಗಿದೆ.[1] ಈ ಗೀತೆಗಳನ್ನು ಜನಪದಗೀತೆ, ಜನಪದಕಾವ್ಯ, ಹಳ್ಳಿಪದ, ನಾಡಗೀತೆ, ಲೋಕಗೀತೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ.

ಜನಪದಕೃಷಿ ಹಾಗೂ ಸಹಜ ಚಟುವಟಿಕೆಗಳ ನಡುವೆ ಈ ಜನಪದ ಗೀತೆಗಳು ಉದಯಿಸಿವೆ. ಅನಾಮಧೇಯ ಕರ್ತೃತ್ವ, ಸಮೂಹ ಪುನರ್ ಸೃಷ್ಟಿ, ಪಾಠಾಂತರ, ಮೌಖಿಕ ಪರಂಪರೆ, ಜನಪ್ರಿಯತೆ, ಸ್ಥಳೀಯ ಭಾಷೆಯ ಸೊಗಡು ಹಾಗೂ ಸರಳತೆ ಜನಪದಗೀತೆಗಳ ಮುಖ್ಯ ಲಕ್ಷಣಗಳಾಗಿವೆ. ಜನಪದಗೀತೆಗಳು ಅಂದಿನಿಂದ ಇಂದಿನವರೆಗೂ ಜನಪದರ ಬಹುಮುಖ್ಯ ಅಭಿವ್ಯಕ್ತಿ ಮಾಧ್ಯಮವಾಗಿ, ಸಾಮಾಜಿಕ ಮೌಲ್ಯಗಳ ವಾಹಕಗಳಾಗಿ, ಸಂಸ್ಕೃತಿ ನಿರ್ಮಾಣದ ಸೆಲೆಗಳಾಗಿ ಬೆಳೆದು ಬಂದಿವೆ.

ಪ್ರಸ್ತುತ ಪತ್ರಿಕೆಯು ಕಳೆದ ಶತಮಾನದುದ್ದಕ್ಕೂ ವಿವಿಧ ಅಧ್ಯಯನಕಾರರು ಜನಪದ ಗೀತೆಗಳ ವೈವಿಧ್ಯವನ್ನು ಗುರುತಿಸಿರುವ ರೀತಿಯನ್ನು ವಿಶ್ಲೇಷಣೆಗೊಳಪಡಿಸುತ್ತದೆ. ಜನಪದಗೀತೆಗಳ ಸ್ವರೂಪವನ್ನು ಏಕಸೂತ್ರದಲ್ಲಿ ಹಿಡಿದಿಡುವುದು ಕಷ್ಟವೆಂಬುದನ್ನು ಆಧುನಿಕ ವಿದ್ವಾಂಸರು ಅನೇಕ ಸಂದರ್ಭಗಳಲ್ಲಿ ಹೇಳುತ್ತಲೇ ಬಂದಿದ್ದಾರೆ. ಈಗಾಗಲೇ ಜನಪದಗೀತೆಗಳ ಕುರಿತು ಹಲವು ಅಧ್ಯಯನಗಳು ನಡೆದಿವೆ. ಜನಪದಗೀತೆಗಳ ಸ್ವರೂಪದ ಬಗ್ಗೆ ಹಲವಾರು ಜಾನಪದ ತಜ್ಞರು ಅನೇಕ ಆಯಾಮಗಳಿಂದ ವ್ಯಾಖ್ಯಾನಗಳನ್ನು ನೀಡಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅವುಗಳಿಂದ ಆಯ್ದ ಅಭಿಪ್ರಾಯಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

‘ಜನಪದ ಸಾಹಿತ್ಯ ರೂಪಗಳು’ ಎಂಬ ಕೃತಿಯಲ್ಲಿ ಜನಪದ ತಜ್ಞರಾದ ರಾಗೌ ಅವರು ಜನಪದಗೀತೆಗಳನ್ನು ಕುರಿತು “ಇಲ್ಲಿನ ಮನೋಭಾವ ತೀವ್ರ ಮಾನವೀಯ. ರಾಗ ಮತ್ತು ಪದ ರಚನೆಯ ಸುಮಧುರ ಬಂಧವೇ ಇದರ ಲಕ್ಷಣ. ಸರಳತೆ ಮತ್ತು ಸ್ಪಷ್ಟತೆ ಇದರ ಮತ್ತೆರೆಡು ಲಕ್ಷಣಗಳು. ಜನಪದಗೀತೆಯಲ್ಲಿ ಅಭಿಜಾತ ಕಲೆಯ ತಾಂತ್ರಿಕ ಸೂಕ್ಷ್ಮತೆ ಇರದಿದ್ದರೂ, ಅದರಂತೆಯೇ ಇದೂ ಹೆಚ್ಚಿನ ಸ್ಥಾನವನ್ನು ಪಡೆದುಕೊಳ್ಳಬಲ್ಲದು” (ರಾಗೌ; 1986; ಪುಟ 1) ಎಂದು ಹಿರಿಯ ವಿದ್ವಾಂಸರಾದ ರಾಗೌ ಅವರು ಹೇಳಿರುವ ಮಾತುಗಳು ಸರಿಯಾಗಿದೆ. ಉದಾಹರಣೆಗೆ[2]:

ಕಿನ್ನೂರಿ ನುಡಿಸೋನ ದನಿ ಚಂದವೊ
ಕಿನ್ನೂರಿ ನುಡಿಸೋನ ಬೆರಳಿನಂದ ಚಂದವೊ ॥
ಚಿಕ್ಕಿಯುಂಗುರಕೆ ನಾರಿ ಮನಸಿಟ್ಟಳೊ
ಬೆಳ್ಳಿಯುಂಗರಕೆ ನಾರಿ ಮನಸೋತಳೊ
ಎಲ್ಲೋ ಜೋಗಪ್ಪ ನಿನ್ನ ಅರಮನೆ
ಎಲ್ಲೋ ಜೋಗಪ್ಪ ನಿನ್ನ ತಳಮನೆ ॥
(ಮಾನಸ: 2010 : ಪುಟ 7)

ಪ್ರಾಚೀನ ಕಾಲದಿಂದಲೂ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬಂದಿರುವ ಈ ಗೀತೆಗಳು ಗ್ರಾಮೀಣರು ದಿನನಿತ್ಯ ಬಳಸುವ ತಮ್ಮ ಸರಳವಾದ ಆಡುನುಡಿಗಳನ್ನೇ ಹೊಂದಿವೆ ಎಂಬುದು ಇಲ್ಲಿ ಬಹಳ ಮುಖ್ಯವಾದ ವಿಚಾರವಾಗಿದೆ. ಜನಪದರು ಗೀತೆಗಳನ್ನು ಕಟ್ಟುವ ಕುಶಲಮತಿಗಳಾಗಿರುತ್ತಾರೆ, ಅವರು ಸಂದರ್ಭಕ್ಕೆ ತಕ್ಕ ಹಾಗೆ, ಸನ್ನಿವೇಶವನ್ನು ಗ್ರಹಿಸಿ ಜನಪದಗೀತೆಗಳನ್ನು ಹಾಡಿದ್ದಾರೆ, ಅದು ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿದೆ.

ರಾಗೌ ಅವರು ಹೇಳುವಂತೆ 'ರಾಗ' ಮತ್ತು 'ಪದ ರಚನೆ'ಯ ನಡುವಿನ ಸುಮಧುರವಾದ ಬಾಂಧವ್ಯ, 'ಸರಳತೆ' ಮತ್ತು 'ಸ್ಪಷ್ಟತೆ'ಗಳು ಈ ಗೀತೆಗಳ ಬಹುಮುಖ್ಯ ಲಕ್ಷಣಗಳಾಗಿವೆ. ಜನಪದರಿಗೆ ಅಕ್ಷರಜ್ಞಾನ ಇಲ್ಲದೇ ಇರಬಹುದು ಆದರೆ ಅವಿದ್ಯಾವಂತರಲ್ಲ. ಜನಪದರು ದಿನ ನಿತ್ಯ ಮಾತನಾಡುವ ಆಡು ಭಾಷೆಯ ಪದಗಳನ್ನು ಜೋಡಿಸಿ ವೈವಿಧ್ಯಮಯ ಗೀತೆಗಳನ್ನು ನೀಡಿದ್ದಾರೆ. ಆದ್ದರಿಂದಲೇ ಶತಮಾನಗಳು ಕಳೆಯುತ್ತಾ ಬಂದರೂ ಇಂದಿಗೂ ಜನಪದಗೀತೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ ಎಂಬುದನ್ನು ಇಲ್ಲಿ ಗುರುತಿಸಬೇಕು.

ಖ್ಯಾತ ವಿದ್ವಾಂಸರಾದ ದೇ. ಜವರೇಗೌಡ ಅವರು ತಮ್ಮ 'ಜಾನಪದ ಅಧ್ಯಯನ' ಕೃತಿಯಲ್ಲಿ "ಜನಪದಗೀತೆಗಳನ್ನು ಸಂಸಾರ ಸಂಹಿತೆಗಳೆಂದು, ಸಂಸ್ಕೃತಿ ಮೀಮಾಂಸೆಯ ಭಾಷ್ಯಗಳೆಂದು ಧಾರಾಳವಾಗಿ ಹೇಳಬಹುದು. ಇಲ್ಲಿಯ ವೈವಿಧ್ಯವಾಗಲಿ ಜೀವಂತಿಕೆಯಾಗಲಿ ಅನೇಕ ಶಿಷ್ಟಕಾವ್ಯಗಳಲ್ಲಿ ಕಾಣುವುದಿಲ್ಲ. ಅಷ್ಟೇ ಅಲ್ಲ, ಶಿಷ್ಟಕಾವ್ಯ ಕಾಣದ ಲೋಕ ಜೀವನದ ಮತ್ತೊಂದು ಶ್ರೀಮುಖ ಇಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ" (ಜವರೇಗೌಡ ದೇ.; 1976; ಪುಟ 15) ಎಂದು ಹೇಳುತ್ತಾರೆ. ದೇ. ಜವರೇಗೌಡ ಅವರು ಹೇಳಿರುವ ಮಾತುಗಳು ವಾಸ್ತವವಾಗಿವೆ. ಜನಪದಗೀತೆಗಳ ಸಾಹಿತ್ಯದಲ್ಲಿ ಜನಸಾಮಾನ್ಯರಿಂದ ಹಿಡಿದು ಪಂಡಿತ ಪಾಮರರವರೆಗೆ ಸೆಳೆಯುವ ದೊಡ್ಡ ಶಕ್ತಿ ಇದೆ.

ಜನಪದ ಗೀತೆಗಳನ್ನು 'ಸಂಸಾರ ಸಂಹಿತೆ'ಗಳೆಂದು, 'ಸಂಸ್ಕೃತಿ ಮಿಮಾಂಸೆಯ ಭಾಷ್ಯ' ವೆಂದು ದೇ.ಜ.ಗೌ ಅವರು ಗುರುತಿಸಿರುವುದು ಸೂಕ್ತವಾಗಿದೆ. ಕರ್ನಾಟಕದಲ್ಲಿ ಜನಪದಗೀತೆಗಳ ನೂರಾರು ರಾಗ–ಧಾಟಿಗಳು ಸಿಗುತ್ತವೆ. ಜನಪದ ತ್ರಿಪದಿಗಳು ಕನ್ನಡದಲ್ಲಿ ಹೆಚ್ಚು ಸಿಗುತ್ತವೆ. ಅವು ಇಂದಿಗೂ ಸರಳ ಸುಂದರ, ನಾದಮಯವಾಗಿ ಹೊರಹೊಮ್ಮುತ್ತಿವೆ. ಮನುಷ್ಯನ ಕ್ರಿಯಾ ಚಟುವಟಿಕೆಗಳ ನಡುವೆ ಅನೇಕ ಪ್ರಕಾರದ ಜನಪದ ಗೀತೆಗಳು ಜನ್ಮ ತಾಳಿವೆ. ಹೀಗಾಗಿ ಜನಪದಗೀತೆಗಳು ಜನರ ಗೀತೆಯಾಗಿ, ಜನತಾಗೀತೆಯಾಗಿ, ಲೋಕಗೀತೆಯಾಗಿವೆ. ಮೌಖಿಕ ಪರಂಪರೆಯಲ್ಲಿ ಸಾಗಿ ಬಂದಿರುವ ಜನಪದ ಗೀತೆಗಳು ಮಾನವನ ಜೀವನದ ಅವಿಭಾಜ್ಯ ಅಂಗವಾಗಿವೆ. ಹುಟ್ಟು, ಸಾವು, ನಂಬಿಕೆ, ಆಚರಣೆ, ಜಾತ್ರೆ, ಉತ್ಸವ, ಕೃಷಿ ಇತ್ಯಾದಿ ಸಂದರ್ಭಗಳಲ್ಲಿ ಜನಪದರು ತಮ್ಮ ಮನೋಧರ್ಮಕ್ಕೆ ತಕ್ಕಂತೆ ಈ ಗೀತೆಗಳನ್ನು ಕಟ್ಟಿ ಹಾಡುತ್ತಾ ಬಂದಿದ್ದಾರೆ.

ಇಲ್ಲಿ ವಿಶ್ಲೇಷಣೆಗಾಗಿ ಎರಡು ಪಠ್ಯಗಳನ್ನು ಆಯ್ದುಕೊಳ್ಳಬಹುದು. ಮೊದಲನೇ ಪಠ್ಯವು ಹೆಚ್.ಎಲ್.ನಾಗೇಗೌಡ ಅವರ ಸಂಪಾದನೆಯದ್ದಾಗಿದ್ದು ಎರಡನೇ ಪಠ್ಯವು ಮತಿಘಟ್ಟ ಕೃಷ್ಣ ಮೂರ್ತಿ ಅವರ ಸಂಪಾದನೆಯಲ್ಲಿ ಕಂಡುಬರುತ್ತದೆ.

**ಪಠ್ಯ 1**

ಅಕ್ಕಮ್ಮ ತಾಯಿ ಮುಕ್ಕಮ್ಮ ರಾಗಿಯ
ಜಕ್ಕ ಜಕ್ಕನೆ ಉದುರಮ್ಮ । ನಮ್ಮನೆಯ
ಅಕ್ಕಿ ಆರುತಿಯ ಬೆಳಗ್ಯೇವು
(ನಾಗೇಗೌಡ ಹೆಚ್.ಎಲ್.; 1972; ಪುಟ 88)

**ಪಠ್ಯ 2**

ಕಲ್ಲವ್ವಾ ಮಾತಾಯಿ ಮೆಲ್ಲವ್ವ ರಾಗಿಯಾ
ನೀ ಜಲ್ಲಾ ಜಲ್ಲಾನೆ ಉದುರವ್ವ । ನಾ ನಿನಗೆ
ಬೆಲ್ಲದಾರತಿಯ ಬೆಳಗೇನು।
(ಮತಿಘಟ್ಟ ಕೃಷ್ಣ ಮೂರ್ತಿ; 1991; ಪುಟ 162)

ಪಠ್ಯ 1 ಮತ್ತು ಪಠ್ಯ 2 'ಬೀಸುವ ಪದಗಳ' ವ್ಯಾಪ್ತಿಯಲ್ಲಿ ಸಂಗ್ರಹಗೊಂಡಿವೆ. ವಸ್ತುಸ್ಥಿತಿಯ ವಿವರಣೆಯಲ್ಲಿ ಸಹಜ ಭಾಷೆಯಿದೆ. ಒಂದೆಡೆ 'ಅಕ್ಕಿ ಆರುತಿ' ಎಂದಾದರೆ ಮತ್ತೊಂದು ಕಡೆ 'ಬೆಲ್ಲದಾರತಿ' ಎಂದಾಗಿದೆ. ಬೀಸುವ ಕಲ್ಲನ್ನು ಜನಪದರು ದೇವರೆಂದೇ ಭಾವಿಸಿಕೊಂಡು ಭಕ್ತಿ ಭಾವದಿಂದ ಈ ಗೀತೆಯನ್ನು ಕಟ್ಟಿ ಹಾಡಿರುವುದು ವಿಶೇಷವಾಗಿದೆ.[3]

ಭೌಗೋಳಿಕವಾಗಿ ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನ ರೀತಿಯ ಗೀತೆಗಳು ಕಾಣಸಿಗುತ್ತವೆ. "ಸಂಗೀತ ಮತ್ತು ಸಾಹಿತ್ಯಗಳೆರಡನ್ನು ಕೂಡಿಸಿ ಹೊರ ಹೊಮ್ಮಿದ ಶರೀರ ಅವುಗಳದ್ದು" (ಶಿವರಾಮ ಕಾರಂತ ಕೆ.; 1971; ಪುಟ 8) ಜನಪದರು ಹಾಡುವಾಗ ಗೀತೆಯ ಜೊತೆ ವಾದ್ಯವನ್ನು ಬಳಸಿ ಹಾಡುವುದು ಒಂದು ಸಂಪ್ರದಾಯವಾಗಿದೆ. ಹೀಗೆ ಹಾಡುವಾಗ ನಾದ, ಲಯಗಳು ಕೇಳುಗರನ್ನು ಆಕರ್ಷಿಸುತ್ತವೆ. ಹೀಗಾಗಿ ಶಿವರಾಮ ಕಾರಂತ ಅವರ ಅಭಿಪ್ರಾಯ ಸರಿಯಾಗಿದೆ.

ಜನಪದರು ಸಮೂಹ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವಾಗ ಶ್ರಮವನ್ನು ನೀಗಿಸಿಕೊಳ್ಳಲು ಜನಪದಗೀತೆಗಳನ್ನು ಹಾಡುತ್ತಿದ್ದರು, ತಮ್ಮ ನೋವನ್ನು ನಿವಾರಿಸಿಕೊಳ್ಳುತ್ತಿದ್ದರು. ಅದು ಶ್ರಮ ಸಂಬಂಧವಾದ ಜನಪದಗೀತೆಗಳಲ್ಲಿ ಕಾಣಿಸುವ ಬಹುಮುಖ್ಯವಾದ ಗುಣವಾಗಿದೆ. ಅದೇ ರೀತಿ ಜನಪದ ಗೀತೆಗಳಲ್ಲಿ ಅನಾಮಧೇಯ ಕರ್ತೃತ್ವ, ಸಮೂಹ ಪ್ರಕ್ರಿಯೆಯ ಬೆಳವಣಿಗೆ, ಜನಪ್ರಿಯತೆ, ಆಕರ್ಷಣೆಯ ಗುಣ, ಚಲನಶೀಲತೆಯೊಂದಿಗೆ ಕಾಣುತ್ತಾ ಹೋಗುತ್ತವೆ.

ಗ್ರಾಮೀಣರು ದೈಹಿಕವಾಗಿ ತೊಡಗಿಸಿಕೊಂಡು ಮಾಡುವ ಕಾರ್ಯಗಳಾದ ನಾಟಿ, ಉಳುಮೆ, ಬಂಡಿಹೊಡೆಯುವಿಕೆ, ದೈನಂದಿನ ಕೆಲಸ ಕಾರ್ಯಗಳು ಈ ಗೀತೆಗಳ ಹುಟ್ಟಿಗೆ ಕಾರಣವಾಗುತ್ತವೆ. ಬೆಳಗಿನ ಜಾವದಿಂದ ಆರಂಭವಾಗುವ ಪುರುಷ–ಮಹಿಳೆಯರ ದಿನನಿತ್ಯದ ಚಟುವಟಿಕೆಗಳೊಂದಿಗೆ ಜನಪದ ಗೀತೆಗಳು ಹುಟ್ಟುತ್ತವೆ. ಕುಟ್ಟುವ ಪದಗಳು, ಬೀಸುವ ಪದಗಳು, ನಾಟಿಪದಗಳು, ಲಾಲಿಪದಗಳು ಇತ್ಯಾದಿಗಳು ಈ ಮಾದರಿಯವು.

ದೇವರು, ಪ್ರೇಮ, ಕುಟುಂಬ, ಸಂಬಂಧ, ಸ್ನೇಹ, ತವರು, ನೋವು–ನಲಿವು, ಆಚರಣೆ, ಸಂಪ್ರದಾಯ, ವಿವಿಧ ಆಚರಣೆಗಳು ಈ ಸಂದರ್ಭದ ಗೀತೆಗಳಲ್ಲಿರುತ್ತವೆ. ಈ ಎಲ್ಲಾ ಗೀತೆಗಳು ವೈವಿಧ್ಯಮಯವಾಗಿ, ರಂಜನೀಯವಾಗಿದ್ದು, ಕೇಳಲು ಆಹ್ಲಾದಕರವಾಗಿರುತ್ತವೆ. ಉದಾಹರಣೆಗೆ 'ತಾಯಿ'ಯನ್ನು ದೇವರೆಂದೇ ಭಾವಿಸುವ ನಾಲ್ಕು ತ್ರಿಪದಿಗಳು ಹೀಗಿವೆ :

**ಪಠ್ಯ 1**

ತಾಯಿಯ ನೆನೆದರೆ ಬೇಗನೆ ಪದ ಬರಲಿ
ತಾಯವ್ವ ಗಂಗೆ ದಡದಲ್ಲಿ । ಸರಸೋತಿ
ಕಾಯ ಕೊಂಡ್ಹೋಗಿ ಕರೆತನ್ನಿ ॥
(ಸ್ವಾಮಿ ಬಿ.ಎಸ್; 1993; ಪುಟ 22)

**ಪಠ್ಯ 2**

ಆರಾತೀ ಹೊರಟಾವು ಕೀರೂತೀ ಉಳ್ಳೋಳ್ಗೆ
ಕೇರಿ ಕೇರೀಲಿ ಮೆರೆಯೋಳೀಗೆ । ದೊಡ್ಡಮ್ಮಾಗೆ
ಆರಾತಿ ಹೊಂಟಾವು ಐನೂರೂ
(ಅರ್ಚಕ ಬಿ. ರಂಗಸ್ವಾಮಿ; 2001; ಪುಟ 65)

**ಪಠ್ಯ 3**

ಕಾವಿ ದೋತರದವಳೆ ಕೈಲಿ ಜಪಸರದವಳೆ
ಕಾವೇರಿಗ್ಹೋಗಿ ಬರುವಾಗ । ದ್ಯಾವಮ್ಮೆ
ಕಾಯೊಡೆದು ಕೈಯ ಮುಗಿದೇವು
(ಗೊರೂರು ರಾಮಸ್ವಾಮಿ ಅಯ್ಯಂಗಾರ್; 2009; ಪುಟ 13)

**ಪಠ್ಯ 4**

ಆರಾತಿ ಹೊರಾಟವು ಕೀರುತಿ ಉಳ್ಳೋಳ್ಗೆ
ಕೇರಿ ಕೇರೀಲಿ ಮೆರೆಯೋಳ್ಗೆ । ಮಾರಮ್ಮೆ
ಆರ್ತಿ ಹೊರಟಾವು ಐನೂರು
(ಗೊರೂರು ರಾಮಸ್ವಾಮಿ ಅಯ್ಯಂಗಾರ್; 2009; ಪುಟ 14)

ಪಠ್ಯ 1, ಪಠ್ಯ 2, ಪಠ್ಯ 3 ಹಾಗೂ ಪಠ್ಯ 4ರಲ್ಲಿ ಕ್ರಮವಾಗಿ ಸರಸ್ವತಿ, ದೊಡ್ಡಮ್ಮ, ದ್ಯಾಮವ್ವ, ಹಾಗೂ ಮಾರಮ್ಮ ದೇವತೆಗಳ ಬಗ್ಗೆ ಜನಪದರು ತ್ರಿಪದಿಗಳನ್ನು ಕಟ್ಟಿಕೊಟ್ಟಿದ್ದಾರೆ. ಇಂತಹಾ ನೂರಾರು ಗೀತೆಗಳು ಜನಪದರ ಬಾಯಲ್ಲಿ ನಲಿದಾಡುತ್ತಿರುತ್ತವೆ, ಜನಪದರು ಅವುಗಳನ್ನು ಸಹಜವಾಗಿ ಹಾಡುತ್ತಾ ಬಂದಿದ್ದಾರೆ. ಇಂದಿಗೂ ಈ ದೇವತೆಗಳನ್ನು ಹಳ್ಳಿಗಳಲ್ಲಿ ಗ್ರಾಮದೇವತೆಗಳಾಗಿ ಪೂಜಿಸುತ್ತಿದ್ದಾರೆ. ಜನಪದ ಗೀತೆಗಳು ಮಾನವ ಸಮಾಜದ ಬೆಳವಣಿಗೆಯೊಂದಿಗೇ ಬಂದಿರುವುದನ್ನು ಇಲ್ಲಿ ವಿಶೇಷವಾಗಿ ಗುರುತಿಸಬಹುದು. ಆದಿಮ ಜಗತ್ತಿನಿಂದ ಸಂಘಜೀವಿಯಾಗಿದ್ದ ಮಾನವ ಸಮೂಹ ಪ್ರಕ್ರಿಯೆಗಳಲ್ಲಿ, ಜನಪದ ಗೀತೆ, ಸಂಗೀತದಲ್ಲೂ ತನ್ನ ಹೆಜ್ಜೆ ಗುರುತನ್ನು ದಾಖಲಿಸುತ್ತಾ ಬಂದಿದ್ದಾನೆ. ಈ ಗೀತೆಗಳು ನೇರ, ಸರಳ, ಅರ್ಥಗರ್ಭಿತವಾಗಿ ಪರಿಣಾಮಕಾರಿಯಾಗಿ ರಚನೆಗೊಂಡಿವೆ. ಜನಪದಗೀತೆಗಳು ಸಾಮಾನ್ಯವಾಗಿ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ನೆನಪಿನ ಶಕ್ತಿಯಲ್ಲಿ ದಾಖಲಾಗಿ ಭೌಗೋಳಿಕವಾಗಿ ಪ್ರದೇಶದಿಂದ ಪ್ರದೇಶಕ್ಕೆ ಹಬ್ಬುತ್ತಾ ಹಲವಾರು ಗಾಯಕರನ್ನು, ಕೇಳುಗರನ್ನು ಆಕರ್ಷಿಸುತ್ತವೆ. ಇಂತಹ ಸಂದರ್ಭಗಳಲ್ಲಿ ಗೀತೆಗಳು ಭಿನ್ನ ಪಾಠಗಳೊಂದಿಗೆ ರೂಪಾಂತರವಾಗುತ್ತಾ ಹೋಗುತ್ತವೆ. ಉದಾಹರಣೆಗಾಗಿ ಈ ಕೆಳಗಿನ ಪಠ್ಯಗಳನ್ನು ವಿಶ್ಲೇಷಿಸಬಹುದು.

**ಪಠ್ಯ 1**

ಹಿಂದೇ ಜೋಗೀಮಠ ಮುಂದೇ ಜೋಗೀಮಠ
ಸುತ್ತಾ ಶೃಂಗಾರ ಪೇಟೆ ವತ್ತೀಲಿ
ಇರುವಂಥ ಬೆಳ್ಳೂರು ಮಾದಪ್ಪ ॥
(ಅರ್ಚಕ ಬಿ. ರಂಗಸ್ವಾಮಿ; 2001; ಪುಟ 34)

**ಪಠ್ಯ 2**

ಹಿಂದೇ ಐಗೋಳ್ಮಠ ಮುಂದೆ ಐಗೋಳ್ಮಠ
ಶೃಂಗಾರ ಪೇಟೆ ವತ್ತೀಲಿ ಇರುವಂಥ
ಎದ್ದು ತೇರ್ಹರಿಸೋ ಬೆಳ್ಳೂರು ಮಾದಪ್ಪನ
(ಕರೀಂಖಾನ್ ಎಸ್.ಕೆ.; 1955; ಪುಟ 15)

ಪಠ್ಯ 1 ಮತ್ತು ಪಠ್ಯ 2 ಬೆಳ್ಳೂರು ಮಾದಪ್ಪನ ಕುರಿತಾಗಿಯೇ ಇವೆ. ಆದರೆ ಇವುಗಳ ಒಟ್ಟು ಆಶಯದಲ್ಲಿ ಬದಲಾವಣೆ ಆಗಿರುವುದನ್ನು ಗುರುತಿಸಬಹುದು ಹಾಗೂ ಜೋಗಿಮಠ, ಐಗೋಳ ಮಠ ಎಂಬ ಬದಲಾವಣೆ ಕಾಲಾನಂತರದಲ್ಲಿ ಕಾಣಿಸಿಕೊಂಡಿರುವುದನ್ನು ಗುರುತಿಸಬಹುದು.

ಈ ಜನಪದಗೀತೆಗಳ ಮೂಲ ಸೃಷ್ಟಿಕರ್ತ ಯಾರು ಎಂಬುದೇ ಗೊತ್ತಾಗುವುದಿಲ್ಲ. ಮೌಖಿಕ ಪರಂಪರೆಯಲ್ಲಿ ಅವು ಬದಲಾವಣೆ ಆಗುತ್ತಲೇ ಬರುತ್ತವೆ. ಒಬ್ಬನಲ್ಲಿ ಹುಟ್ಟಿದ ಗೀತೆ ಅಥವಾ ಒಂದು ಸಮುದಾಯ ಪಂಗಡದಿಂದ ಬಂದ ಗೀತೆ ಇನ್ನೊಂದು ಸಮುದಾಯ ಪಂಗಡ, ಇನ್ನೊಂದು ಪ್ರದೇಶಕ್ಕೆ ವರ್ಗಾವಣೆ ಆದಾಗ ಸಾಹಿತ್ಯ ಮತ್ತು ರಾಗ-ಧಾಟಿಗಳಲ್ಲಿ ಅಲ್ಪ-ಸ್ವಲ್ಪ ಬದಲಾವಣೆ ಸಹಜವಾಗಿ ಆಗುತ್ತದೆ.

ಹೀಗಾಗಿಯೇ "ಜನಪದಗೀತೆಗಳು ಹೊಸ ಹೊಸದಾಗಿ ಹುಟ್ಟುವುದಕ್ಕಿಂತ ಹಳೆಯ ಗೀತೆಗಳೇ ಗಾಯಕರ ಕೈಯಲ್ಲಿ ಅಥವಾ ಬಾಯಲ್ಲಿ-ಬೆಳೆಯುತ್ತಾ ಹೋಗುವುದೆ ಹೆಚ್ಚು" (ಸಿ.ಪಿ.ಕೆ.; 1975; ಪುಟ 3) ಎಂದು ಖ್ಯಾತ ವಿದ್ವಾಂಸರಾದ ಸಿ.ಪಿ.ಕೆ. ಅವರು ಗುರುತಿಸುತ್ತಾರೆ. ತಿಂಗಾಳು ಮುಳುಗಿದವೋ, ಚಲ್ಲಿದರೂ ಮಲ್ಲಿಗೆಯ, ನಿಂಬಿಯಾ ಬನಾದ ಮುಂತಾದ ನೂರಾರು ಜನಪ್ರಿಯ ಜನಪದಗೀತೆಗಳನ್ನು ಇಲ್ಲಿ ಪೂರಕವಾಗಿ ಗಮನಿಸಬಹುದು.[4]

ಇನ್ನೊಂದು ಬಹಳ ಮುಖ್ಯ ಅಂಶವೆಂದರೆ ವಿದ್ಯಾವಂತರಿಂದ ರಚಿತವಾದ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯ ಕ್ರಿಯಾತ್ಮಕವಾದದ್ದು ಎಂಬುದಾಗಿದೆ. ಬದುಕಿನ ಓಟ, ದುಡಿಮೆ, ದೈನಂದಿನ ಬದುಕಿನಲ್ಲಿ ಈ ಜನಪದ ಗೀತೆಗಳು ಉತ್ಪತ್ತಿಯಾಗುತ್ತವೆ. ಜನಪದಗೀತೆಗಳು ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಿಂತ ಸಮಷ್ಟಿಯಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಪ್ರಯೋಗವಾಗಿವೆ. ಗ್ರಾಮೀಣ ಜನಪದ ಗೀತೆಗಳ ಮೂಲಕ ಕಥೆ, ಸಂದೇಶ, ನೀತಿಗಳ ಮೌಲ್ಯಗಳು ಅಭಿವ್ಯಕ್ತಿಗೊಳ್ಳುತ್ತವೆ ಎಂಬುದು ಈ ಗೀತೆಗಳ ಅಧ್ಯಯನದಲ್ಲಿ ಸ್ಪಷ್ಟವಾಗುತ್ತದೆ.

ಕರ್ನಾಟಕದ ವಿವಿಧ ಪ್ರದೇಶಗಳನ್ನು ಗಮನಿಸಿದಾಗ ಕನ್ನಡ ಭಾಷೆಯ ಸೊಗಸು, ವೈವಿಧ್ಯಮಯ ನುಡಿಗಟ್ಟುಗಳು ಜನಪದಗೀತೆಗಳಲ್ಲಿ ಅಡಕಗೊಂಡು ದಾಖಲಾಗಿರುವುದು ಸೋಜಿಗವೆನಿಸುತ್ತದೆ. ಎಲ್. ಗುಂಡಪ್ಪ ಅವರ 'ನಾಡ ಪದಗಳು' ಸಂಕಲನದ ಮುನ್ನುಡಿ ಭಾಗದಲ್ಲಿ ಬಿ.ಎಂ. ಶ್ರೀಕಂಠಯ್ಯ ಅವರು "ಕರುಳು ಕರುಳನ್ನು ಮಿಡಿಯುತ್ತದೆ; ಅಂತರಂಗ ಅಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತದೆ, ನಮ್ಮ ಹಳ್ಳಿಗರ-ಗಂಡು ಹೆಣ್ಣುಗಳೆಲ್ಲರ ಜೀವನ ಸಾರವನ್ನೆ ಹೊರಹೊಮ್ಮಿಸುತ್ತಿರುವ ಈ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು" (ಗುಂಡಪ್ಪ ಎಲ್.; 1947; ಪುಟ ೧೫) ತಾಯಿ, ತವರು ಕುರಿತಾದ ಜನಪದಗೀತೆಗಳಲ್ಲಿ ಮನ ಮಿಡಿಯುವ ನೂರಾರು ತ್ರಿಪದಿಗಳು ಈಗಾಗಲೇ ಸಂಗ್ರಹವಾಗಿವೆ. ಈ ನಿಟ್ಟಿನಲ್ಲಿ ಬಿ.ಎಂ. ಶ್ರೀಕಂಠಯ್ಯ ಅವರು ಹೇಳಿರುವ ಮಾತುಗಳು ಜನಪದಗೀತೆಗಳ ಸಾರಸತ್ವವನ್ನೇ ಮಾರ್ದನಿಸುತ್ತವೆ.

ಜನಪದ ಸಾಹಿತ್ಯವು ಅನೇಕ ತಲೆಮಾರುಗಳಿಂದ ಪ್ರಚಲಿತದಲ್ಲಿದ್ದರೂ ಅದು ತೀರಾ ಸ್ಥಗಿತಗೊಂಡಿರುವ ಸಾಹಿತ್ಯವಲ್ಲ. ನಿತ್ಯನಿರಂತರವಾಗಿ,

ಚಲನಶೀಲತೆಯನ್ನು ಹೊಂದಿರುವುದರಿಂದಲೇ ಅದು ಜೀವಂತಿಕೆಯನ್ನು ಹೊಂದಿದೆ. ಅನಕ್ಷರಸ್ಥ ಸಮುದಾಯ ಮೌಖಿಕವಾಗಿ ಆಡುವ ಅನುಭವ ನುಡಿಗಳೇ ಈ ಜನಪದಗೀತೆಗಳು ಎಂಬ ಅಭಿಪ್ರಾಯವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ದೇ. ಜವರೇಗೌಡ ಅವರು ತಮ್ಮ 'ಜಾನಪದ ಅಧ್ಯಯನ' ಕೃತಿಯಲ್ಲಿ "ಜನಪದಗೀತೆ ಒಂದು ರೀತಿಯ ಆಶು ಕವಿತೆ. ಯಾವುದೋ ಒಂದು ಕ್ಷಣದಲ್ಲಿ ಆನಂದ ತುಂಬಿ ತುಳುಕಿದಾಗ, ನೋವು ಮನಸ್ಸನ್ನೆಲ್ಲ ಹಿಂಡಿದಾಗ, ಗಾನ ಲಹರಿ ಹರಿಯುತ್ತದೆ. ಅವನ ಪಾಡೇ ಹಾಡಾಗುತ್ತದೆ" (ಜವರೇಗೌಡ ದೇ.; 1976; ಪುಟ 7) ಎನ್ನುತ್ತಾರೆ. ಇದು ಜನಪದಗೀತೆಗಳಿಗಿರುವ ಶಕ್ತಿಯನ್ನು ಎತ್ತಿ ತೋರಿಸುತ್ತದೆ.

ಶ್ರಮದ ನಡುವೆಯೇ ಹುಟ್ಟುವ ಗುಣ ಈ ಗೀತೆಗಳಿಗಿರುವುದರಿಂದ ಮಾನವ ಕುಲ ಕಸುಬುಗಳ ನಡುವೆಯೇ ಇವು ಹುಟ್ಟುತ್ತಾ ಬಂದಿವೆ. ಶಿವರಾಮಕಾರಂತರು ತಮ್ಮ 'ಜಾನಪದಗೀತೆಗಳು' ಕೃತಿಯಲ್ಲಿ "ಜನಪದಗೀತೆಗಳಿಗೆ ಅನೇಕ ಮುಖಗಳಿಂದ ಪ್ರೇರಣೆ ಬಂದಿದೆ, ಹಕ್ಕಿ ಹೂ ಮೊದಲಾದ ಸಾಮಾನ್ಯ ವಿಷಯಗಳು ಪ್ರೇರೇಪಿಸಿದ ಹಾಡುಗಳಿವೆ; ಅನುಭವದಿಂದ ಬೆಂದು ನೊಂದ ಮನಸ್ಸು ಹೇಳಿದ ಮಾತುಗಳಿವೆ; ಮತ ಧರ್ಮಗಳಿಂದ ಪ್ರೇರಿತವಾದ ಹಾಡುಗಳೂ ವಿಶೇಷವಾಗಿವೆ" (ಶಿವರಾಮಕಾರಂತ ಕೆ.; 1971; ಪುಟ 14) ಎನ್ನುತ್ತಾರೆ. ಜನಪದಗೀತೆಗಳು ಆಯಾ ಪಂಗಡಗಳಲ್ಲಿ ಹುಟ್ಟುತ್ತಾ ಹೋಗಿವೆಯಾದರೂ ಕಾಲ ಕಾಲಕ್ಕೆ ಸಮುದಾಯಗಳನ್ನು ಮೀರಿ ವಿವಿಧ ಕಡೆಗಳಿಗೆ ತಲುಪುತ್ತವೆ.

ಕ.ರಾ. ಕೃಷ್ಣಮೂರ್ತಿ ಅವರ 'ಜಾನಪದ ಪ್ರೇಮಗೀತೆಗಳು' (1957) ಸಂಕಲನದ ಮುನ್ನುಡಿಯಲ್ಲಿ ತ.ರಾ.ಸು. ಅವರು "ಜನಪದಗೀತೆಗಳು ಒಂದು ಜನಾಂಗದ, ಒಂದು ಸಂಸ್ಕೃತಿಯ ಹೃದಯದಿಂದ ಮೂಡಿಬಂದ ಸಾರಸ್ವತ ಸಂಪತ್ತು ನಾಗರಿಕತೆಯಿಂದ ವಿರೂಪಗೊಳ್ಳದೆ ತನ್ನ ಸಹಜ ಸೊಬಗನ್ನ ಉಳಿಸಿಕೊಂಡು ಅವಿನಾಶಿಯಾಗಿ ಕಳ ಕಳಿಸುತ್ತಿರುವ ಕುಸುಮ ಸಂಚಯ. ಹೃದಯದಿಂದ ಮೂಡಿ, ನೇರವಾಗಿ ಹೃದಯವನ್ನು ಪ್ರವೇಶಿಸಿ, ಪ್ರವೇಶಿಸಿದ ಹೃದಯವನ್ನು ತನ್ನದಾಗಿಸಿಕೊಳ್ಳುವ ಶಕ್ತಿ ಜನಪದಗೀತೆಗಳಿಗಿದ್ದಂತೆ ಮತ್ತಾವ ಸಾಹಿತ್ಯ ಪ್ರಕಾರಕ್ಕೂ ಇಲ್ಲ" (ಕ.ರಾ. ಕೃಷ್ಣಮೂರ್ತಿ; 1957; ಪುಟ 1) ಎಂದಿದ್ದಾರೆ. ಈ ಮಾತಿಗೆ ಪೂರಕವಾಗಿ ಗಮನಿಸುವುದಾದರೆ ಹತ್ತಾರು ಜನಪದಗೀತೆಗಳು ನಮ್ಮ ಕಣ್ಣ ಮುಂದೆ ಬರುತ್ತವೆ. ಉದಾಹರಣೆಗೆ:

> ಚೆಲ್ಲಿದರು ಮಲ್ಲಿಗೆಯ ಬಾನಸೂರೇರಿ ಮ್ಯಾಲೆ
> ಅಂದಾದ ಚೆಂದಾದ ಮಾಯಕಾರ ಮಾದೇವ್ಗೆ । ಸೊಲ್ಲು ।
> (ರಾಜಶೇಖರ್ ಪಿ.ಕೆ. (ಪ್ರ.ಸಂ.); 2012; ಪುಟ 22)

ಜನಪದಗೀತೆಗಳನ್ನು ನೋಡಿದಾಗ ಎಲ್ಲ ಸಮುದಾಯದವರನ್ನು ಸೆಳೆಯುವ ಶಕ್ತಿ ಈ ಗೀತೆಗಳಿಗಿವೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಜೊತೆಗೆ ಕಾಲದಿಂದ ಕಾಲಕ್ಕೆ ಮಾಧ್ಯಮಗಳು ಬದಲಾದಾಗ ಇಂತಹ ಗೀತೆಗಳು ಬೇರೆ ಬೇರೆ ಮಾಧ್ಯಮಗಳಲ್ಲಿ ತಮ್ಮದೇ ಛಾಪು ಮೂಡಿಸಿರುವುದನ್ನು ಕಾಣಬಹುದು.

ಬಿ.ಎಸ್. ಗದ್ದಗಿಮಠ ಅವರು ತಮ್ಮ 'ಕನ್ನಡ ಜಾನಪದಗೀತೆಗಳು' ಎಂಬ ಮಹಾ ಪ್ರಬಂಧದಲ್ಲಿ "ಕನ್ನಡ ಜಾನಪದ ಹಾಡುಗಳು ಕನ್ನಡ ಹಳ್ಳಿಗರ ಕಾವ್ಯ ರಚನೆಯ ಹೆಗ್ಗುರುತಾಗಿವೆ. ಈ ಹಾಡುಗಳಲ್ಲಿ ಕನ್ನಡ ಗಡಿಗಡಿಗಳ ಗಾಳಿಯು ಒಂದೇ ಸಮನೆ ಸುಳಿದಾಡಿ ಹಳ್ಳಿಗರ ರಸಿಕತೆಯ ಕಂಪನ್ನು ಬೀರುವುದು. ಕನ್ನಡ ಸಂಸ್ಕೃತಿಯೇ ಇಲ್ಲಿ ನಾದ ಮಾಡುತ್ತಿರುವುದು. ಕನ್ನಡಿಗರ ಸರಳ ಜೀವನವೇ ಇಲ್ಲಿ ಮೂರ್ತಗೊಂಡು ಅನೇಕ ಸಂಪ್ರದಾಯಗಳಾಗಿ ಬಂದಿವೆ" (ಗದ್ದಗಿಮಠ ಬಿ.ಎಸ್.; 1963; ಪುಟ 48) ಎಂದು

**ಅಭಿಪ್ರಾಯಪಟ್ಟಿದ್ದಾರೆ.**

ಬೀಸುವ ಪದಗಳು, ವೃತ್ತಿ ಗಾಯಕ ಪರಂಪರೆಯ ತಂಡಗಳು, ಜೋಗಿಗಳು, ಶಿಶುಗೀತೆಗಳು ಮುಂತಾದ ಗೀತೆಗಳನ್ನು ನೂರಾರು ವರ್ಷಗಳಿಂದ ಜನಪದರು ಹಾಡುತ್ತಾ ಬಂದಿದ್ದಾರೆ. ಈಗಾಗಲೇ ಅವುಗಳ ಅನೇಕ ಸಂಗ್ರಹಗಳು ಪ್ರಕಟವಾಗಿವೆ. ಅವುಗಳ ಬಗ್ಗೆ ಅಧ್ಯಯನಕಾರರು ಅನೇಕ ಅಂಶಗಳನ್ನು ಗುರುತಿಸಿದ್ದಾರೆ.

ಸಿ.ಪಿ.ಕೆ. ಅವರು ತಮ್ಮ 'ಜಾನಪದ ಸರಸ್ವತಿ' ಎಂಬ ಪುಸ್ತಕದಲ್ಲಿ "ಈ ಸೃಷ್ಟಿಕ್ರಿಯೆ ಒಬ್ಬರಿಂದ ಆರಂಭವಾಗಿ ಒಬ್ಬರಿಗೇ ನಿಲ್ಲುವಂಥದಲ್ಲ; ಅನೇಕ ವ್ಯಕ್ತಿಗಳನ್ನು ಪೀಳಿಗೆಗಳನ್ನು ವ್ಯಾಪಿಸುವಂಥದು. ಪರಂಪರೆ ಜೀವಂತವಾಗಿರುವ ತನಕ ಅದು ಮುಂದುವರಿಯುತ್ತದೆ. ಒಂದು ಗೀತೆ ಕಾಲ ದೇಶಗಳಲ್ಲಿ ಹರಡುತ್ತ ಹೋದಂತೆ ಅದರ ಮೂಲ ನಿರ್ಮಾಪಕ ಮರೆತು ಹೋಗುತ್ತಾನೆ. ಅದು ಸಮಷ್ಟಿಯ ಆಸ್ತಿಯಾಗುತ್ತದೆ" (ಸಿ.ಪಿ.ಕೆ.; 1973; ಪುಟ 101) ಎನ್ನುತ್ತಾರೆ.

ಅಂಬಳಿಕೆ ಹಿರಿಯಣ್ಣ ಅವರು ತಮ್ಮ 'ಜಾನಪದ ಸಮಾಗಮ' ಎಂಬ ಕೃತಿಯಲ್ಲಿ "ಜನಪದಗೀತೆ ಜನಪದ ಸಾಹಿತ್ಯದ ಒಂದು ಬಹುಮುಖ್ಯ ಪ್ರಕಾರ. ಸಾರವತ್ತಾದ ಭಾಗ ಕೂಡ. ಜನಪದ ಸಂಸ್ಕೃತಿಯ ಒಂದು ಅಂಗವಾಗಿರುವ ಜನಪದಗೀತೆಗಳು ಯಾವಾಗ ಯಾರಿಂದ ಹುಟ್ಟಿದವು ಎಂಬ ಪ್ರಶ್ನೆಗೆ ಖಚಿತವಾದ ಉತ್ತರ ಹೇಳುವುದು ಕಷ್ಟ. ಅವು ಅನಕ್ಷರಸ್ಥ ಸಮಾಜದಲ್ಲಿ ವಾಕ್ಪರಂಪರೆಯಲ್ಲಿ ಹುಟ್ಟಿ ಬೆಳೆದು ಬಂದವು ಎಂಬುದು ಸಾಮಾನ್ಯ ತಿಳಿವಳಿಕೆ. ಅಷ್ಟೇ ಅಲ್ಲ, ಅವು ಅನಂತ ಕಾಲದಿಂದಲೂ ಮಾನವ ಸಂಸ್ಕೃತಿಯ ಅಂಗವಾಗಿ ಬೆಳೆದು ಉಳಿದು ಬಂದಿವೆ ಎಂದು ಹೇಳಲು ಸಾಕಷ್ಟು ಆಧಾರಗಳಿವೆ" (ಅಂಬಳಿಕೆ ಹಿರಿಯಣ್ಣ; 2008; ಪುಟ 223) ಎಂದು ಹೇಳುತ್ತಾರೆ. ಇತಿಹಾಸ ಮತ್ತು ಪ್ರಾಚೀನ ಕಾಲದ ಸಂಸ್ಕೃತಿಗಳ ಅಧ್ಯಯಕ್ಕೆ ತೊಡಗಿದಾಗ ಜಾನಪದ ಸಂಸ್ಕೃತಿಗಳ ಕುರುಹುಗಳು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತವೆ. ಹೀಗಾಗಿ ಅಂಬಳಿಕೆ ಹಿರಿಯಣ್ಣ ಅವರ ಮಾತುಗಳಲ್ಲಿ ಸ್ಪಷ್ಟತೆ ಇದೆ.

ಈ ಗೀತೆಗಳಿಗೆ ಅಂಕಿತ ಇಲ್ಲದ ಕಾರಣ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬೇರೆ ಬೇರೆ ರೂಪದಲ್ಲಿ ಪ್ರಸಾರವಾಗುತ್ತಾ ಹೋಗುತ್ತವೆ. ಜನಪದಗೀತೆಗಳಿಗೆ ಕಾಲ ದೇಶ ವಾಪ್ತಿಗಳ ಗಡಿರೇಖೆ ಇರುವುದಿಲ್ಲ. ಹಳ್ಳಿಗಳಲ್ಲಿ ಯಂತ್ರಗಳಿಗಿಂತ ನಿಸರ್ಗದ ಮಡಿಲಲ್ಲಿ ಸಿಗುವ ಉತ್ಪನ್ನಗಳು, ಮನೆಯಲ್ಲಿ ತಾವೇ ತಯಾರಿಸಿದ ವಸ್ತುಗಳ ಜೊತೆಗೆ ಹೆಚ್ಚು ಒಡನಾಟವಿರುತ್ತದೆ. ಗ್ರಾಮೀಣರು ತಮ್ಮ ವೃತ್ತಿಯಲ್ಲಿ ಈ ಉತ್ಪನ್ನಗಳನ್ನು ಬಳಸಿಕೊಂಡು ದೈನಂದಿನ ಜೀವನ ನಡೆಸುತ್ತಾ ಬಂದಿದ್ದಾರೆ, ಇವುಗಳೊಂದಿಗೆ ಸಾಗಿ ಬಂದಿರುವ ಜನಪದಗೀತ ಸಾಹಿತ್ಯ ಸರಳ ಸುಂದರವಾಗಿರುತ್ತದೆ. ಆಧುನಿಕತೆಯ ಪ್ರಭಾವದಿಂದ ತನ್ನ ಸೃಷ್ಟಿಯ ಪರಿಸರದಿಂದ ಬೇರ್ಪಟ್ಟು ಉಳಿದುಕೊಂಡಿರುವ ಜನಪದ ಗೀತೆಗಳಲ್ಲಿ ಆ ಮೂಲ ಸೊಬಗು, ದನಿ ಬನಿ ಕ್ರಮೇಣ ಕಣ್ಮರೆಯಾಗುತ್ತಿದೆ. ಅದನ್ನು ಉಳಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕಾದ ಜವಾಬ್ದಾರಿ ಇಂದು ಕೇವಲ ಜನಪದರು, ಅಧ್ಯಯನಕಾರರು ಮಾತ್ರವಲ್ಲದೆ ಸಂಪೂರ್ಣ ಸಮಾಜದ ಮೇಲಿದೆ.

ಕನ್ನಡ ಜನಪದ ಗೀತೆಗಳ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ನೀಡಿರುವುದನ್ನು ಇಲ್ಲಿ ಗಮನಿಸಬೇಕು. ಅವರ ಅಭಿಪ್ರಾಯಗಳಲ್ಲಿ ಇರುವ ಭಿನ್ನತೆಯೇ ಜನಪದ ಗೀತೆಗಳ ವಿರಾಟ್ ಸ್ವರೂಪವನ್ನು ದರ್ಶಿಸುತ್ತದೆ. ಜನಪದ ಗೀತೆಗಳು ಯಾವುದೇ ಸಿದ್ದಮಾದರಿಯ, ಏಕಸೂತ್ರಕ್ಕೆ ಒಳಪಡುವುದಿಲ್ಲ ಎಂಬುದು ವಿವಿಧ ವಿದ್ವಾಂಸರ ವ್ಯಾಖ್ಯಾನಗಳ ಮುಖಾಂತರ ಸ್ಪಷ್ಟವಾಗುತ್ತದೆ. ಜನಪದ ಗೀತೆಗಳ

ಸೃಷ್ಟಿಯು ಶ್ರಮದ ಸಂದರ್ಭದಲ್ಲಿ ಏರ್ಪಡುತ್ತದೆ ಎಂಬುದು ವಿಧಿತವಾದದು. ಇದಕ್ಕೆ ನಿದರ್ಶನವಾಗಿ ಕೃಷಿಸಂಬಂಧೀ ಗೀತೆಗಳೇ ಯಥೇಚ್ಛವಾಗಿ ದೊರೆಯುತ್ತವೆ. ಉದಾಹರಣೆಗೆ ಬೀಸುವ ಪದಗಳು, ಕುಟ್ಟುವ ಹಾಡುಗಳು, ನಾಟಿ ಪದಗಳು ಇವುಗಳನ್ನು ನೋಡಬಹುದು. ಹಾಗೆಯೇ ಜನಪದ ಗೀತೆಗಳ ವಸ್ತುವೂ ಸಹ ವೈವಿಧ್ಯತೆಯಿಂದ ಕೂಡಿರುವುದನ್ನು ಗಮನಿಸಬಹುದು. ಲೋಕದ ವಿಚಾರಗಳಿಂದ ಹಿಡಿದು ದೈವ ಸಂಬಂಧೀ ಅಂಶಗಳು ಜನಪದ ಗೀತೆಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು. ಪ್ರಸ್ತುತ ದಿನಗಳಲ್ಲಿ ಜನಪದ ಗೀತೆಗಳು ಸಿನಿಮಾ ಮಾಧ್ಯಮಗಳಲ್ಲಿ ಬಳಕೆಗೊಂಡು ಹೆಚ್ಚು ಜನಪ್ರಿಯವಾಗುತ್ತಿರುವುದನ್ನು ಗಮನಿಸಬಹುದು.

ಕರ್ನಾಟಕದಲ್ಲಿ ಜನಪದಗೀತೆಗಳ ಸಾಹಿತ್ಯದಲ್ಲಿ ವೈವಿಧ್ಯತೆ ಇರುವುದನ್ನು ಪ್ರದೇಶವಾರು ಜನಪದ ಸಾಹಿತ್ಯವನ್ನು ಒಂದೆಡೆ ಕಲೆಹಾಕಿ ನೋಡಿದಾಗ ಸ್ಪಷ್ಟವಾಗುತ್ತದೆ. ಪಾಠಾಂತರ, ಚಲನಶೀಲತೆ, ಪುನರುಕ್ತಿಗಳು ಜನಪದಗೀತೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಮೌಖಿಕ ಪರಂಪರೆಯಿಂದ ಬಂದಿರುವ ಜನಪದಗೀತೆಗಳು ಪ್ರಸ್ತುತ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಅಧ್ಯಯನಕ್ಕೆ ಒಳಪಟ್ಟಾಗ ಕರ್ನಾಟಕದಲ್ಲಿನ ಪ್ರಾದೇಶಿಕ ಸಂಸ್ಕೃತಿಗಳ ಆಚಾರ, ವಿಚಾರ, ಸಂಪ್ರದಾಯಗಳ ಕುರಿತಾದ ವಿಭಿನ್ನ ಅಂಶಗಳು ಬೆಳಕಿಗೆ ಬರುತ್ತವೆ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. ಜನಪದಗೀತೆ ಎಂಬುದು ಗಡಿ ಪ್ರದೇಶಗಳನ್ನು ಮೀರಿದ ಸಾಹಿತ್ಯವಾಗಿರುತ್ತದೆ. ಇದರ ಅರ್ಥ ವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಜನಪದಗೀತೆಗಳ ಅಧ್ಯಯನದ ಮೂಲಕ ಸ್ಥಳೀಯ ಸಂಸ್ಕೃತಿಗಳ ಹೆಚ್ಚಿನ ಮಾಹಿತಿಗಳು ನಮಗೆ ಗೋಚರವಾಗುತ್ತವೆ.

**ಅಡಿಟಿಪ್ಪಣಿಗಳು**

1. ಕರ್ನಾಟಕದಲ್ಲಿ ಜನಪದ ಅಧ್ಯಯನದ ಬೆಳವಣಿಗೆಯನ್ನು ಗಮನಿಸುವಾಗ ಕಾಲಾನುಕ್ರಮದಲ್ಲಿ ಪ್ರಕಟವಾದ ಸಂಕಲನಗಳು, ಅವುಗಳ ಸಂಪಾದಕರ ಮಾತುಗಳು, ಮುನ್ನುಡಿಯ ಮಾತುಗಳು, ಅವುಗಳ ಬಗ್ಗೆ ತದ ನಂತರದ ಅಧ್ಯಯನಕಾರರು ನೀಡಿರುವ ಅಭಿಪ್ರಾಯಗಳು ಇವೆಲ್ಲವನ್ನೂ ಗಮನಿಸಬೇಕಾಗುತ್ತದೆ. ಪ್ರಸ್ತುತ ಸಂಶೋಧಕರ ಸಂಶೋಧನಾ ಪ್ರಬಂಧದದಲ್ಲಿ ಇವುಗಳನ್ನು ವಿವರವಾಗಿ ಗುರುತಿಸಿಕೊಳ್ಳಲಾಗಿದೆ. ಇಲ್ಲಿ ವಿಶ್ಲೇಷಣೆಗೆ ಅಗತ್ಯವಾದ ಅಂಶಗಳನ್ನು ಆಯ್ದುಕೊಂಡು ಮುಂದುವರೆಯಲಾಗಿದೆ.
2. ಕನ್ನಡದ ಜನಪದ ಕ್ಷೇತ್ರದಲ್ಲಿ ಇದೊಂದು ಮುಖ್ಯ ಗೀತೆ. ಇದು ಬಹಳ ಜನಪ್ರಿಯವಾಗಿದ್ದು ಹಳ್ಳಿ ಹಳ್ಳಿಗಳಲ್ಲಿ ಈ ಗೀತೆಯನ್ನು ಹಾಡುತಿದ್ದರು. ಕಾಲಾನಂತರ ಈ ಗೀತೆಯ ಧಾಟಿಯು ಇತರ ಮಾಧ್ಯಮಗಳ ಗೀತೆಗಳಲ್ಲೂ ಬಳಕೆಯಾಯಿತು. ಆಧುನಿಕ ವಾದ್ಯಪರಿಕರಗಳೊಂದಿಗೂ ಇದನ್ನು ಹಾಡತೊಡಗಿದರು. ಕ್ರಮೇಣ ಕನ್ನಡದ 'ಜೋಗಿ' ಚಲನಚಿತ್ರಕ್ಕೆ ಗೀತೆಯ ಪಲ್ಲವಿ ಮಾತ್ರ ಸೇರ್ಪಡೆಗೊಂಡು ಇನ್ನಷ್ಟು ಜನಪ್ರಿಯಗೊಂಡಿತು. ಕನ್ನಡ ಚಲನಚಿತ್ರದಲ್ಲಿ ಬಳಸಿಕೊಂಡ ಇಂತಹ ಜನಪದಗೀತೆಗಳ ಕುರಿತು ಹೆಚ್ಚಿನ ಅಧ್ಯಯನಗಳ ನಡೆಯಬೇಕಿದೆ.
3. ಆಧುನಿಕತೆಯ ಪ್ರಭಾವಕ್ಕೆ ಇದೊಂದು ಒಳ್ಳೆಯ ಉದಾಹರಣೆಯಾಗಿದೆ. ಬೀಸುವ ಕಲ್ಲುಗಳು ಮತ್ತು ಹಾಡುವ ಗಾಯನ ತಂಡಗಳು ಇಂದು ಬಹುತೇಕ ಮಾಯವಾಗಿವೆ. ಈ ಕಲ್ಲುಗಳು ಸಂಗ್ರಹಾಲಯಗಳಲ್ಲಿ ಅಥವಾ ಪಾಳುಬಿದ್ದ ಪ್ರದೇಶಗಳಲ್ಲಿ ಅನಾಥವಾಗಿ ಇರುವುದನ್ನು ನೋಡಬಹುದಾಗಿದೆ. ನಿರ್ದಿಷ್ಟ ವಸ್ತು ಸಂಸ್ಕೃತಿ ಅಳಿಯುವಾಗ ಅದರೊಂದಿಗಿನ ಸಾಹಿತ್ಯವೂ ಕಣ್ಮರೆಯಾಗುತ್ತದೆ.
4. 'ಎಲೆ ಕೆಂಚಿ ತಾರೆ', 'ಮೂಡಲ್ ಕುಣಿಗಲ್ ಕೆರೆ', 'ಮಾಯದಂತ ಮಳೆ ಬಂತಣ್ಣ' ಮುಂತಾದ ಗೀತೆಗಳನ್ನು ಗಾಯಕ ಸಮೂಹ ವೇದಿಕೆಗಳಲ್ಲಿ ಹಾಡುವಾಗ ಹಾಗೂ ಮಾಧ್ಯಮಗಳ ಮೂಲಕ ಪ್ರಸಾರವಾದಾಗ ಸಾಹಿತ್ಯ ಮತ್ತು ಸಂಗೀತದಲ್ಲಿ ಬದಲಾವಣೆಯಾಗುತ್ತಿರುತ್ತದೆ. ಈ ಕುರಿತಾಗಿ ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ.

**ಆಕರ ಸೂಚಿ**


1. ಅಂಬಳಿಕೆ ಹಿರಿಯಣ್ಣ; 2008; ಜಾನಪದ ಸಮಾಗಮ; ಮೈಸೂರು ವಿಶ್ವವಿದ್ಯಾಲಯ, ಮೈಸೂರು
2. ಅರ್ಚಕ ಬಿ. ರಂಗಸ್ವಾಮಿ; 2001; ಹುಟ್ಟಿದ ಹಳ್ಳಿ ಹಳ್ಳಿಯ ಹಾಡು; ಮೈಸೂರು ವಿಶ್ವಮಿದ್ಯಾಲಯ, ಮೈಸೂರು
3. ಕ.ರಾ. ಕೃಷ್ಣಮೂರ್ತಿ; 1957; ಜಾನಪದ ಪ್ರೇಮಗೀತೆಗಳು; ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು
4. ಕರೀಂಖಾನ್ ಎಸ್.ಕೆ.; 1955; ಜನಪದಗೀತೆ; ರಾಮರಾಜ್ಯ ಪ್ರಕಾಶನ, ಬೆಂಗಳೂರು
5. ಗದ್ದಗಿಮಠ ಬಿ.ಎಸ್.; 1963; ಕನ್ನಡ ಜಾನಪದಗೀತೆಗಳು; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
6. ಗುಂಡಪ್ಪ ಎಲ್.; 1947; ನಾಡಪದಗಳು; ಬೆಂಗಳೂರು
7. ಗೊರೂರು ರಾಮಸ್ವಾಮಿ ಅಯ್ಯಂಗಾರ್; 2009; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
8. ಜವರೇಗೌಡ ದೇ.; 1976; ಜಾನಪದ ಅಧ್ಯಯನ; ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು
9. ನಾಗೇಗೌಡ ಎಚ್.ಎಲ್.; 1972; ಸೋಬಾನೆ ಚಿಕ್ಕಮ್ಮನ ಪದಗಳು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
10. ಮಾನಸ; 2010; ಜನಪದ ಜೋಕಾಲಿ; ತನುಮನ ಪ್ರಕಾಶನ, ಬೆಂಗಳೂರು
11. ಮತಿಘಟ್ಟ ಕೃಷ್ಣಮೂರ್ತಿ; 1976; ಕನ್ನಡ ಜಾನಪದ ಸಾಹಿತ್ಯ ಭಂಡಾರ, ಬೆಂಗಳೂರು
12. ರಾಗೌ; 1986(ದ್ವಿ.ಮು.); ಜನಪದ ಸಾಹಿತ್ಯ ರೂಪಗಳು; ವಾಗ್ದೇವಿ ಪುಸ್ತಕಗಳು, ಮೈಸೂರು
13. ರಾಜಶೇಖರ್ ಪಿ.ಕೆ.(ಪ್ರ.ಸಂ.); 2012; ಮುತ್ತು ಕೇರಾಕೆ ಮೊರವಾದೆ; ಅರ್ಪಿತ ಪ್ರಕಾಶನ, ಮೈಸೂರು
14. ಶಿವರಾಮ ಕಾರಂತ ಕೆ.; 1971; ಜಾನಪದಗೀತೆಗಳು; ಮೈಸೂರು ವಿಶ್ವವಿದ್ಯಾಲಯ, ಮೈಸೂರು
15. ಸಿ.ಪಿ.ಕೆ.; 1973; ಜನಪದ ಸರಸ್ವತಿ; ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು
16. ಸಿ.ಪಿ.ಕೆ.; 1975; ಜನಪದಗೀತೆ; ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು
17. ಸಿ.ಪಿ.ಕೆ.; 1981; ಜನಪದ ಸಾಹಿತ್ಯ ಪ್ರವೇಶಿಕೆ; ಚಿತ್ರಭಾನು ಪ್ರಕಾಶನ, ಮೈಸೂರು
18. ಸ್ವಾಮಿ ಬಿ.ಎಸ್.; 1993; ಜಾನಪದ ಸೌರಭ; ಗೋರಕ್ಷನಾಥ ಪ್ರಕಾಶನ, ಬೆಂಗಳೂರು